# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(Corporate Identity Number (CIN): U40109KA1999SGC025521)

## ನೇಮಕಾತಿ- ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ

## ಅಧಿಸೂಚನೆ

**ಸಂಖ್ಯೆ: ಕವಿಪ್ರನಿನಿ/ಬಿ16/40360/2016-17** **ದಿನಾಂಕ: 27.01.2018**

**ವಿಷಯ:** ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಇಂಜಿನಿಯರ್(ವಿದ್ಯುತ್) (ಬ್ಯಾಕ್‌ಲಾಗ್) ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್(ವಿದ್ಯುತ್/ಕಾಮಗಾರಿ), ಕಿರಿಯ ಇಂಜಿನಿಯರ್(ವಿ)(ಬ್ಯಾಕ್‌ಲಾಗ್), ಸಹಾಯಕ ಹಾಗೂ ಕಿರಿಯ ಸಹಾಯಕ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 08.09.2016.
2. ಸ್ಪರ್ಧಾತ್ಮಕ ಪರೀಕ್ಷೆಯ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 23.06.2017.
3. ಅಂತಿಮ ಉತ್ತರಗಳ ಕೀ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಮತ್ತು ಅಭ್ಯರ್ಥಿಗಳ 1:2 ರ ಅನುಪಾತದ ಪಟ್ಟಿಯನ್ನು ಪ್ರಕಟಿಸಿ ಹೊರಡಿಸಿದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17 ದಿನಾಂಕ: 23.08.2017, 30.08.2017, 13.11.2017.
4. ಮೂಲ ದಾಖಲಾತಿಗಳ ಪರಿಶೀಲನೆಗಾಗಿ ಹೊರಡಿಸಿದ ಅಧಿಸೂಚನೆ: ಕವಿಪ್ರನಿನಿ, ದಿನಾಂಕ: 18.11.2017, ಹೆಸ್ಕಾಂ, ದಿನಾಂಕ: 25.11.2017, ಸೆಸ್ಕ್ ಮತ್ತು ಬೆಸ್ಕಾಂ, ದಿನಾಂಕ: 27.11.2017 ಹಾಗೂ ಜೆಸ್ಕಾಂ, ದಿನಾಂಕ: 28.11.2017.

***

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17, ದಿನಾಂಕ: 08.09.2016 ಕ್ಕೆ ಅನುಗುಣವಾಗಿ ದಿನಾಂಕ: 07.07.2017 ರಿಂದ 11.07.2017 ರವರೆಗೆ ನಡೆದ ಆನ್-ಲೈನ್ ಅಪ್ಟಿಟ್ಯೂಡ್ ಟೆಸ್ಟ್‌ನಲ್ಲಿ ಗಳಿಸಿರುವ ಅಂಕಗಳ ಜೇಷ್ಠತೆಯ ಆಧಾರದ ಮೇರೆಗೆ ಹಾಗೂ ಕವಿಪ್ರನಿನಿಯಲ್ಲಿ ದಿನಾಂಕ: 25.11.2017 ರಿಂದ 28.11.2017 ರವರೆಗೆ ಹಾಗೂ ಎಸ್ಕಾಂಗಳಲ್ಲಿ ದಿನಾಂಕ: 05.12.2017 ರಿಂದ 08.12.2017 ರವರೆಗೆ ನಡೆದ ಮೂಲ ದಾಖಲಾತಿಗಳ ಪರಿಶೀಲನೆಯ ನಂತರ ಸಹಾಯಕ ಇಂಜಿನಿಯರ್(ವಿದ್ಯುತ್), ಸಹಾಯಕ ಇಂಜಿನಿಯರ್(ವಿದ್ಯುತ್) (ಬ್ಯಾಕ್‌ಲಾಗ್) ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್(ವಿದ್ಯುತ್/ಕಾಮಗಾರಿ), ಕಿರಿಯ ಇಂಜಿನಿಯರ್(ವಿ)(ಬ್ಯಾಕ್‌ಲಾಗ್), ಸಹಾಯಕ ಹಾಗೂ ಕಿರಿಯ ಸಹಾಯಕ ಹುದ್ದೆಗಳ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್-ಆಫ್ (Cut-Off) ಅಂಕಗಳೊಂದಿಗೆ ಕವಿಪ್ರನಿನಿ ಹಾಗೂ ಎಸ್ಕಾಂಗಳ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಮಂಜಸವಾದ ಆಕ್ಷೇಪಣೆಗಳಿದ್ದಲ್ಲಿ, 1:2 ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ ಸೂಕ್ತ ವಿವರ ಹಾಗೂ ದಾಖಲಾತಿಗಳೊಂದಿಗೆ ತಮ್ಮ ಹೆಸರು, ಅರ್ಜಿ ಸಂಖ್ಯೆ ಹಾಗೂ ಅರ್ಜಿ ಸಲ್ಲಿಸಿದ್ದ ಹುದ್ದೆಯ ಹೆಸರಿನೊಂದಿಗೆ ಅನುಬಂಧ-1 ರಲ್ಲಿ ಸೂಚಿಸಿರುವ ಸಂಬಂಧಿಸಿದ ಕಂಪನಿಯ ಇ-ಮೇಲ್ ಐಡಿಗೆ ದಿನಾಂಕ: 04.02.2018 ರೊಳಗೆ ಸಲ್ಲಿಸಬಹುದಾಗಿದೆ. **ಆನ್‌ಲೈನ್ ಮೂಲಕ ಹೊರತುಪಡಿಸಿ ಇನ್ನಾವುದೇ ಮಾರ್ಗದಿಂದ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.**

ಅಂಗವಿಕಲ ಕೋಟಾದಡಿಯಲ್ಲಿ ಅಭ್ಯರ್ಥಿಗಳನ್ನು ದೈಹಿಕ ಪರೀಕ್ಷೆಗೊಳಪಡಿಸಿ ಆಯ್ಕೆ ಮಾಡಲಾಗಿದೆ. ಹಲವಾರು ಅಭ್ಯರ್ಥಿಗಳು ಬಹು ವಿಧವಾದ ಅಂಗವೈಕಲ್ಯತೆಯನ್ನು, ಶೇಕಡ 40 ಕ್ಕಿಂತ ಕಡಿಮೆ ಅಂಗವೈಕಲ್ಯತೆಯನ್ನು ಮತ್ತು ಅಂಗವಿಕಲ ಕೋಟಾದಡಿಗೆ ನಿಗಧಿಪಡಿಸಿದ ಅಂಗವೈಕಲ್ಯತೆಯನ್ನು ಹೊರತುಪಡಿಸಿ ಬೇರೆ ಅಂಗವೈಕಲ್ಯತೆಯನ್ನು ಹೊಂದಿರುವುದಕ್ಕಾಗಿ ಅಭ್ಯರ್ಥಿಗಳನ್ನು ಅಂಗವಿಕಲ ಕೋಟಾದಡಿಯಿಂದ ಅನರ್ಹಗೊಳಿಸಲಾಗಿದೆ. ಆದಾಗ್ಯೂ ಶೇಕಡ 40 ಕ್ಕಿಂತ ಕಡಿಮೆ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳನ್ನು ಸಂಬಂಧಿಸಿದ ಪ್ರವರ್ಗ/ಕೋಟಾದಡಿಯಲ್ಲಿ ಅರ್ಹತೆಗನುಗುಣವಾಗಿ ಪರಿಗಣಿಸಲಾಗಿರುತ್ತದೆ. 1:2 ಅನುಪಾತದಲ್ಲಿ ವಿವಿಧ ಪ್ರವರ್ಗಗಳ ಅಂಗವಿಕಲ ಕೋಟಾದಡಿಯಲ್ಲಿ ಅಭ್ಯರ್ಥಿಗಳ ಕೊರತೆ ಉಂಟಾಗಿರುತ್ತದೆ. ವಿವರಗಳನ್ನು ಅನುಬಂಧ-2 ರಲ್ಲಿ ಸೂಚಿಸಲಾಗಿದೆ. ಆದಾಗ್ಯೂ ಮೆರಿಟ್ ಲಿಸ್ಟ್‌ನಲ್ಲಿ ಕೆಳಗಿರುವ ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆ ಹಾಗೂ ದೈಹಿಕ ಪರೀಕ್ಷೆಯ ದಿನಾಂಕವನ್ನು ಕವಿಪ್ರನಿನಿ/ಎಸ್ಕಾಂಗಳ ವೆಬ್‌ಸೈಟ್‌ನಲ್ಲಿ ಲಭ್ಯಪಡಿಸಲಾಗುವುದು.

**ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.**

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು.

# KARNATAKA POWER TRANSMISSION CORPORATION LIMITED

(Corporate Identity Number (CIN): U40109KA1999SGC025521)

## RECRUITMENT- PUBLISHING OF PROVISIONAL SELECTION LIST

## NOTIFICATION

**No: KPTCL/B16/40360/2016-17** **Date: 27.01.2018**

**Sub:** Publication of Provisional Selection List for the post of Assistant Engineer (Elec.), Assistant Engineer (Elec.) (NHK) (Backlog), Assistant Accounts Officer, Junior Engineer (Elec./Civil), Junior Engineer (Elec.) (NHH & HK) (Backlog), Assistant and Junior Assistant-Reg.

**Ref:**
1. Employment Notification No: KPTCL/B16/40360/2016-17dated: 08.09.2016.
2. Online Aptitude Test Notification No: KPTCL/B16/40360/2016-17 dated: 23.06.2017.
3. Final Answer Keys, Scores of Online Aptitude Test and Short Listing of candidates Notification No: KPTCL/B16/40360/2016-17 dated: 23.08.2017, 30.08.2017, 13.11.2017.
4. Notification No: KPTCL/B16/40360/2016-17 dated 18.11.2017 issued with regard to verification of original documents/testimonials and HESCOM Notification dated 25.11.2017, CESC & BESCOM Notification dated 27.11.2017 and GESCOM Notification dated 28.11.2017.

***

In pursuance to KPTCL Employment Notification No: KPTCL/B16/40360/2016-17 dated: 08.09.2016, the PROVISIONAL LIST of candidates selected **purely on merit** on the basis of the marks secured in the **Online Aptitude Test** held from 07.07.2017 to 11.07.2017 and after the original documents verification process held from 25.11.2017 to 28.11.2017 in KPTCL and 05.12.2017 to 08.12.2017 in ESCOMs for recruitment to the post of Assistant Engineer (Elec.), Assistant Engineer (Elec.) (NHK) (Backlog), Assistant Accounts Officer, Junior Engineer (Elec./Civil), Junior Engineer (Elec.) (HK & NHK) (Backlog), Assistant and Junior Assistant in KPTCL and ESCOMs is published along with provisional cut-off marks in the respective KPTCL & ESCOMs websites.

Objections, if any, from among the 1:2 shortlisted candidates on the Provisional Selection List may be submitted along with relevant details, scanned copy of supporting documents to the **e-mail IDs of KPTCL & ESCOMs noted in Annexure-1** duly indicating the candidates name, Application ID and the post applied for. **The last date for receipt of objections is 04.02.2018. Objections will not be entertained through any other mode.**

The candidates shortlisted under PH quota were subjected to physical examination. Many of the candidates with multiple disabilities, disability of less than 40% and disability not notified for the particular post have been disqualified for selection under PH quota. However, the candidates with disability of less than 40% are considered for selection under their respective Categories/Quotas based on the merit. As such, there is a shortfall of eligible candidates under PH Quota across various categories from among the 1:2 shortlist of candidates for selection The details are noted in Annexure-2. Hence, the next eligible candidates down the line from the merit list will be called for document verification and physical examination. The date will be notified in KPTCL & ESCOMs website.

**OBJECTIONS WILL NOT BE ENTERTAINED AFTER THE LAST DATE INDICATED ABOVE**

Director (Admn. & HR)
Corporate Office, KPTCL,
Kaveri Bhavan, Bengaluru.